ಶ್ರೀ ಎಂ. ವೀರಪ್ಪ ಮೊಯಿಲಿ : ಅದಕ್ಕೆ ಯಾವುದಾದರೂ ಒಂದು ಪರಿಹಾರ ಉಪಾಯ ಹುಡುಕಿ ಇವತ್ತು ಸಂಜೆ ಅಥವಾ ನಾಳೆ ಬೆಳಿಗ್ಗೆ ಈ ಸದನದಲ್ಲಿ ಹೇಳಿಕೆ ಕೊಡುತ್ತೇನೆ. ಫರ್ದರಿ ಸಸ್ಪೆನ್‌ಷನ್ ಆಗುವುದಿಲ್ಲ.

ಬೆಳಗಾಂ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನಲ್ಲಿ ಕುಡಿಯುವ ನೀರಿಗಾಗಿ ಧರಣಿ ಸತ್ಯಾಗ್ರಹ.

+ ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ) : ಮೊನ್ನೆ ನಿನ್ನೆ ನಾನು ತಮ್ಮ ಗಮನಕ್ಕೆ ತಂದಿದ್ದೇನೆ. ಮತ್ತು ಇವತ್ತು ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಪರ್ಮಿಷನ್ ತೆಗೆದುಕೊಂಡಿದ್ದೆ. ಬೆಳಗಾಂ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನಲ್ಲಿ ಕಳೆದ 6ನೇ ತಾರೀಖಿನಿಂದ ಕುಡಿಯುವ ನೀರಿಲ್ಲವೆಂದು ಧರಣಿ ಸತ್ಯಾಗ್ರಹ ನಡೆಯುತ್ತಿದೆ. ಸಂಬಂಧಪಟ್ಟ ಸಚಿವರಿಗೆ ಮತ್ತು ಮುಖ್ಯ ಮಂತ್ರಿಗಳಿಗೆ ತಂತಿ ಮೂಲಕ ಮನವಿ ಮೂಲಕ ವಿಷಯವನ್ನು ತಿಳಿಸಿದ್ದಾರೆ. ಇದುವರೆಗೆ ಸರ್ಕಾರದಿಂದ ಯಾವುದೇ ಕ್ರಮ ಇಲ್ಲ. ಚಿಕ್ಕೋಡಿ ಶಿಕ್ಷಕರಲ್ಲಿ ಎಲ್ಲಾ ಪಕ್ಷದವರು, ವಾಲೆಂಟರಿ ಆರ್ಗನೈಸೇಷನ್ಸ್ ಕೂಡಿ 6ನೇ ತಾರೀಖಿನಿಂದ ಧರಣಿ ಸತ್ಯಾಗ್ರಹ ಮಾಡುತ್ತಿದ್ದಾರೆ.

ಅಲ್ಲಿ ಬಿಸಿನೆಸ್ ಎಸಾಬ್ಲಿಷ್‌ಮೆಂಟ್‌ಗಳು ಬಂದ್ ಆಗಿವೆ. ಕೋರ್ಟ್‌ಗಳು ಬಂದ್ ಆಗಿವೆ. ಮಾನ್ಯ ಮುಖ್ಯ ಮಂತ್ರಿಗಳು ಇದನ್ನು ಗಮನಿಸಬೇಕು. ಇವತ್ತು ಅಲ್ಲಿ ಕುಡಿಯುವುದಕ್ಕೆ ನೀರಿಲ್ಲ. ಒಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಇವತ್ತು ಚಿಕ್ಕೋಡಿಗೆ ಕುಡಿಯುವ ನೀರಿನ ಯೋಜನೆ ಏನಿದೆ. ಆ ಯೋಜನೆಯನ್ನು ಆದಷ್ಟು ಬೇಗ ಸರ್ಕಾರ ಜಾರಿಗೆ ತರಬೇಕಾಗುತ್ತದೆ. ಚಿಕ್ಕೋಡಿ ಮುನಿಸಿಪಾಲಿಟಿಯಲ್ಲಿ ಹಣ ಇಲ್ಲ ಎಂದು ಆ ಯೋಜನೆಯನ್ನು ಜಾರಿಗೆ ತರಲಿಕ್ಕೆ ಆಗಲಿಲ್ಲ. ನಾನು ಹೆಚ್.ಯು.ಡಿ. ಮಿನಿಸ್ಟರ್ ಆಗಿದ್ದಾಗ 5 ಲಕ್ಷ ರೂಪಾಯಿಯನ್ನು ಆ ಮುನಿಸಿಪಾಲಿಟಿಗೆ ಕೊಟ್ಟಿದ್ದೆ. ಈಗ ಡೆಪ್ಯುಟಿಕಮಿಷನರ್ 10 ಲಕ್ಷ ರೂಪಾಯಿಯನ್ನು ಕೊಟ್ಟಿದ್ದು 2 ಲಕ್ಷ ರೂಪಾಯಿ ಮುನಿಸಿಪಾಲಿಟಿ ಹಾಕಿ ಒಟ್ಟು 17 ಲಕ್ಷ ರೂಪಾಯಿಗಳನ್ನು ಹಾಕಿ ಆ ಯೋಜನೆ ಮಾಡಲಿಕ್ಕೆ ಸಾಧ್ಯವಿದೆ. ಆದರೆ ಅದು ತಡವಾಗುತ್ತದೆ. ಆದ್ದರಿಂದ ತಕ್ಷಣ ಬೋರ್‌ವೆಲ್ ಮಾಡುವ ಬಗ್ಗೆ ಅಥವಾ ಲಾರಿ ಮುಖಾಂತರ ನೀರು ಪೂರೈಸುವ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಚಿಕ್ಕೋಡಿ ಶಹರದಲ್ಲಿ ಕಳೆದ 20-30 ವರ್ಷಗಳಿಂದ ಈ ಜ್ವಲಂತ ಸಮಸ್ಯೆ ಏನಿದೆ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಎಂದು ತಮ್ಮ ಮುಖಾಂತರ ಮಾನ್ಯ ಮುಖ್ಯ ಮಂತ್ರಿಗಳನ್ನು ನಾನು ಕೇಳಿಕೊಳ್ಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಒಂದು ಮಾತು ಹೇಳಬೇಕು. ಚಿಕ್ಕೋಡಿಯಲ್ಲಿ 6ನೇ ತಾರೀಖಿನಿಂದ ಧರಣಿ ಸತ್ಯಾಗ್ರಹ ನಡೆಯುತ್ತಿದೆ. ಬಿಸಿನೆಸ್ ಎಸ್ಟಾಬ್ಲಿಷ್‌ಮೆಂಟ್‌ಗಳು ಬಂದ್ ಆಗಿವೆ. ಕುಡಿಯುವ ನೀರಿನ ಸಮಸ್ಯೆ ಇದೆ. ಅಲ್ಲಿ ಮುಖ್ಯ ಮಂತ್ರಿಗಳು ಕುಡಿಯುವ ನೀರಿನ ಅಭಾವ ದೂರ ಮಾಡುವುದಕ್ಕೆ ಹೆಚ್ಚು ಪ್ರಿಯಾರಿಟಿ ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಯಾವುದೇ ಕ್ರಮ ಸರ್ಕಾರದಿಂದ ಇನ್ನೂ ಆಗಿಲ್ಲ. ಹೆಚ್. ಯು.ಡಿ. ಮಿನಿಸರ್‌ಗೆ ಟೆಲಿಗ್ರಾಂ ಬಂದಿದೆ. ತಮಗೂ ಟೆಲಿಗ್ರಾಂ ಬಂದಿದೆ. ಆದ್ದರಿಂದ ಪ್ರಾಧಾನ್ಯತೆ ಮೇಲೆ ಚಿಕ್ಕೋಡಿ ಕುಡಿಯುವ ನೀರಿನ ಯೋಜನೆ ಮುಗಿಸುವುದಕ್ಕೆ ಕೆಲಸ ಶುರು ಮಾಡಬೇಕಾಗುತ್ತದೆ. ಅಲ್ಲಿ ನೀರಿಲ್ಲ. 6ನೇ ತಾರೀಖಿನಿಂದ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ತಕ್ಷಣ ಲಾರಿ ಮುಖಾಂತರ, ಬೋರ್‌ವೆಲ್ ಮಾಡಿ, ಓಪನ್ ವೆಲ್ ಮಾಡಿ ನೀರು ಪೂರೈಸುವ ವ್ಯವಸ್ಥೆ ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತು ಹೇಳಿದರೆ ಒಳ್ಳೆಯದಾಗುತ್ತದೆ.

(ಶ್ರೀಮತಿ ಸುಮ ವಸಂತ ಅವರು ಪೀಠದಲ್ಲಿದ್ದರು)

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಸದಸ್ಯರು ಪ್ರಸ್ತಾಪ ಮಾಡುತ್ತಾ ಇರತಕ್ಕದ್ದು ಚಿಕ್ಕೋಡಿ ಟೌನ್‌ಗೆ ಸಂಬಂಧಪಟ್ಟ ಕುಡಿಯುವ ನೀರಿನ ಸಮಸ್ಯೆ ಬಗ್ಗೆ. ಈಗಾಗಲೇ ನನ್ನ ಹತ್ತಿರ ಬಂದು ಈ ವಿಚಾರವನ್ನು ಮಾತನಾಡಿದ್ದಾರೆ. ಮೊನ್ನೆ ನಾಲ್ಕೈದು ಜನ ಬಂದಿದ್ದರು ಎಂದು ಕಾಣುತ್ತದೆ. ಮಲ್ಲಾರಿಗೌಡ ಪಾಟೀಲರು ಮಾತನಾಡಿದ್ದಾರೆ. ಮಾನ್ಯ ಕಣಗಲಿ ಎಂ.ಎಲ್.ಸಿ, ಮತ್ತೊಬ್ಬ ಸದಸ್ಯರಾದ ಪ್ರಕಾಶ ಹುಕ್ಕೇರಿ ಅವರು, ವೀರಕುಮಾರ್ ಪಾಟೀಲರು ಮಾತನಾಡಿದ್ದಾರೆ. ತಾವು ಕೂಡ ಪ್ರಸಾಪ ಮಾಡಿದ್ದೀರಿ. ಈಗಾಗಲೇ ಈ ವಿಚಾರದಲ್ಲಿ ಹೆಚ್.ಯು.ಡಿ. ಮಿನಿಸ್ಟರ್ ಜಾರ್ಜ್ ಅವರ ಹತ್ತಿರ ಮಾತನಾಡಿದ್ದೇನೆ. ನನ್ನ ಎದುರಿಗೇ ಸದಸ್ಯರನ್ನು ಭೇಟಿ ಮಾಡಿಸಿದ್ದೇನೆ. ನಾನು ಏನು ಹೇಳಿದ್ದೇನೆಂದರೆ, ಅರ್ಜೆಂಟಾಗಿ ನೀರು ಒದಗಿಸುವ ವಿಚಾರದಲ್ಲಿ ಏನು ಕಾರ್ಯ ಕ್ರಮ ಹಾಕುತ್ತೀರೋ ಅದಕ್ಕೆ ಹಣಕಾಸು ಬಿಡುಗಡೆ ಮಾಡುತ್ತೇನೆಂದು ನಾನು ಈಗಾಗಲೆ ತಿಳಿಸಿದ್ದೇನೆ. ನಿಮ್ಮ ಪಕ್ಷದ ಸಭೆ ಸೇರಿದಾಗ ಅಲ್ಲೂ ಕೂಡ ಭೇಟಿ ಮಾಡಿ ನಾನು ಮಾತನಾಡಿದ್ದೇನೆ. ನೀವು ತೀರ್ಮಾನ ಮಾಡಿ, ಒಂದು ವೇಳೆ ಕ್ಯಾಬಿನೇಟ್ ಡಿಸಿಷನ್ ಆಗಬೇಕಾದರೆ ರ‍್ಯಾಟಿಫಿಕೇಷನ್ ನನ್ನ ಹತ್ತಿರ ಕಳುಹಿಸಕೊಡಬಹುದು ಮೊದಲು ಆರ್ಡರ್ಸ್ ಇಷ್ಟು ಮಾಡಿ ಎಂದು ನಿನ್ನೆ ಸಾಯಂಕಾಲವೇ ಹೇಳಿದ್ದೇನೆ. ಲಾರಿಯಲ್ಲಿ ಅರ್ಜೆಂಟಾಗಿ ನೀರನ್ನು ಟ್ರಾನ್ಸ್‌ಪೋರ್ಟ್ ಮಾಡುವ ಬಗ್ಗೆಯೂ ನಿನ್ನೆ ಸಾಯಂಕಾಲವೇ ಹೇಳಿದ್ದೇನೆ.

Mr. Speaker : I have an announcements to make. I have received a message from her magesty the area, Head of commonwealth in connection with the commonwealth day, the message is going to be circulated among the members.

EACH year, the commonwealth Day celeberations draw attention to the multi-nation, multi-race and multi-faith nature of this unique organistions. But we should also be looking at ways to make practical use of these advantages. I therefore welcome the idea that this year the theme of the celeberations should be 'science in the commonwealth'.

The laws of nature, which have been uncovered by seientists of all nations, are valid everywhere on earch. They are not affected by political , religious of racial differences. Scientific discoveries affect all our lives and they already have an important influence on the natural world.

But with scientific progress, as we climb one hill another has a way of coming into view. For example, medical seience has made it possible for more children to survive and for more adults to live heal thier and longer lives. This is the positive achivement but it has also resulted in an alarming growth in the world's human population. Agricultural science has made it possible to produce more food, and industrial science has brought a higher standard of liveing to many peoplel. But the processes of agricultural and industrial production are using up more and more of the world's limited natural resources. We are now looking for ways of using science to protect out natural environment and not destroy it. If we succeed, we can be sure that there will be another hill to climb.

Science therefore poses a serious dilemma. In itself, it is neither good nor bad, the problems are only created by the way it is used. They challenge to scientists today is to bring benefits of science to the less prosperous commuities whilst at the same time safeguarding the natural world. To do this successfully our scientists will need understanding and encouragement of the population as a whole.

The commonwealth, with its many well tried channesl of communication and consultation, is uniquely placed not only to enable member countries to keep abreast of scientific advances, I believe that the commonwealth tradition of quiet co-operation and its advantage of common language can make a special contribution to the practial application of science wherever it is most needed for the sake of human welfare as well as for the long-term health of our planet.

ನಿಯಮ 334ರ ಮೇರೆಗೆ

ಭದ್ರಾವತಿಯಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣ ಸ್ಥಾಪನೆಗೆ ಒತ್ತಾಯ

ಶ್ರೀ ಎಸ್. ಇಸಾಮಿಯಾ : ಮಾನ್ಯ ಅಧ್ಯಕ್ಷರೇ, ಭದ್ರಾವತಿಯಲ್ಲಿ ಕೆ.ಎಸ್.ಆರ್.ಟಿ.ಸಿ ಬಸ್‌ಸ್ಟ್ಯಾಂಡ್ ಇಲ್ಲದೆ ಭಾರಿ ತೊಂದರೆಯಾಗಿದೆ. ಭದ್ರಾವತಿ ತಾಲ್ಲೂಕಿನಲ್ಲಿ 6 ಲಕ್ಷ ಜನರಿದ್ದಾರೆ. ಅನೇಕ ವರ್ಷಗಳಿಂದ ಇಲ್ಲೊಂದು ಬಸ್ ಸ್ಟ್ಯಾಂಡ್ ಕಟ್ಟಿಸಿಕೊಡಬೇಕೆಂದು ಕೇಳುತ್ತಾ ಬಂದರೂ, ಈವರೆಗೂ ಆ ಕಾರ್ಯ ಆಗಿಲ್ಲ. ಬಸ್ಸಿನಲ್ಲಿ ಹೋಗುವ ಮತ್ತು ಬರುವ ಪ್ರಯಾಣಿಕರಿಗೆ ತುಂಬಾ ತೊಂದರೆಯಾಗಿರುತ್ತದೆ. ಆದಕಾರಣ, ಆದಷ್ಟು ಶೀಘ್ರ ಭದ್ರಾವತಿಗೆ ಒಂದು ಸರಕಾರಿ ಬಸ್‌ಸ್ಟ್ಯಾಂಡ್ ಕಟ್ಟಿಸಿಕೊಡುವುದು ಅತೀ ಪ್ರಾಮುಖ್ಯವಾಗಿದೆ. ಈ ಕುರಿತು ಸಾರಿಗೆ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ಸಾರಿಗೆ ಸಚಿವರ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ಕೊಡಬಯಸುತ್ತೇನೆ.

ಭದ್ರಾವತಿಯು ಶಿವಮೊಗ್ಗ ಜಿಲ್ಲೆಯ ತಾಲ್ಲೂಕು ಕೇಂದ್ರ. 1981ರ ಜನಗಣತಿಯ ಪ್ರಕಾರ ಈ ಪಟ್ಟಣದ ಜನಸಂಖ್ಯೆ 1,45,000 ಆಗಿರುತ್ತದೆ. ಈ ಪಟ್ಟಣವು ದೊಡ್ಡ ಉದ್ದಿಮೆಗಳ ಔದ್ಯೋಗಿಕ ಕೇಂದ್ರ. ಇಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣವಿರುವುದಿಲ್ಲ. ಪುರಸಭೆಯ ಬಸ್ ನಿಲ್ದಾಣವನ್ನು ಖಾಸಗೀ ಬಸ್ ಮಾಲೀಕರೂ ಮತ್ತು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಉಪಯೋಗಿಸುತ್ತಿದೆ. ಸಧ್ಯ ಇಲ್ಲಿ 320 ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಾಹನಗಳ ಸಂಚಾರವಿರುತ್ತದೆ.

ಇಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಬಸ್ ನಿಲ್ದಾಣ ನಿರ್ಮಿಸಲು ನಿವೇಶನ ಪಡೆಯಲು 1977ರಿಂದಲೇ ಪ್ರಯತ್ನಿಸುತ್ತಿದೆ. ಪುರಸಭೆಯ ಸಂತೆ ಮೈದಾನ (3 ಎಕರೆ ಹದಿನಾರುವರೆ ಗುಂಟೆ) ವನ್ನು ಪಡೆಯಲು ಪ್ರಯತ್ನಿಸಲಾಯಿತು. ಆದರೆ, ಪುರಸಭೆಯ ಈ ಸ್ಥಳಕ್ಕೆ 4 ಲಕ್ಷ ಕ್ರಯ ಬೇಡಿರುವುದರಿಂದ ವಿಷಯವನ್ನು ಕೈಬಿಡಲಾಯಿತು.